

ಬೌದ್ಧಿಕ–ಮಾನಸಿಕ ಪ್ರಕ್ರಿಯೆ. ಗಟ್ಟಿ ಕೃತಿಗೆ ತನ್ನಿಂದ ತಾನೇ ಮಾರ್ಯಾದೆ ಸಿಗುತ್ತದೆ.

3 ವೃತ್ತಿಪರ ವಿಮರ್ಶಕರು ಅಂತ ಯಾರು ಇರುವುದಿಲ್ಲ. ಭಾಷೆ ಬಲ್ಲ ಎಲ್ಲರ ಅಭಿಪ್ರಾಯಗಳು ವಿಮರ್ಶೆಯೇ. ವಿಮರ್ಶೆಯನ್ನು ನಾವು ದೊಡ್ಡ ಬಹುಮಾನ ಸಿಗಲು ಇರುವ ಮುಖ್ಯ ಅಸ್ತ್ರದಂತೆ ನೋಡದೇ, ಒಂದು ಅಭಿಪ್ರಾಯದಂತೆ ಸ್ವೀಕರಿಸಬೇಕು.

4 ಮುಖ್ಯ ಕೃತಿಗಳು, ಅಮುಖ್ಯ ಕೃತಿಗಳು ಅಂತ ಇವೆಯೇ? ಹಾಗಾದರೆ ಆ ಕೃತಿಗಳು ಯಾವವು? ಯಾವುದೇ ಒಂದು ಕೃತಿಗೆ ಇಂಥದ್ದೇ ಮಾನದಂಡಗಳು ಅಂತ ಇರುವುದಿಲ್ಲ. ಹಾಗೇಯೇ ವಿಮರ್ಶೆಗೂ ಇರುವುದಿಲ್ಲ. ವಿಮರ್ಶಕ ಎಂದು ಹಣೆಪಟ್ಟಿ ಹಚ್ಚಿಕೊಂಡವರು ಓದದೇ ಹೋದ ಮಾತ್ರಕ್ಕೆ ಆ ಕೃತಿಯ ಮೌಲ್ಯ ಕುಸಿಯುವುದಿಲ್ಲ. ಪ್ರಕಟವಾಗಿರುವ ಎಲ್ಲಾ ಕೃತಿಗಳಿಗೂ ವಿಮರ್ಶೆ ಸಿಕ್ಕೇ ಸಿಗುತ್ತದೆ. ಅದನ್ನು ಸ್ವೀಕರಿಸುವ ಮನಸ್ಸಿರಬೇಕಷ್ಟೇ. ಅದು ಓದುಗನ ಅಭಿಪ್ರಾಯವೇ ನಿಜವಾದ ವಿಮರ್ಶೆ ಎಂದು ಸ್ವೀಕರಿಸಿದಾಗ ಮಾತ್ರ ಸಿಗುವಂತದ್ದು.

5 ನಿಜವಾಗಿ ವರ್ತಮಾನದ ತಲ್ಲಣಗಳಿಗೆ ಧ್ವನಿಯಾಗುವ, ಸಮಕಾಲೀನ ಸಾಮಾಜಿಕ ಪಿಡುಗುಗಳಿಗೆ ಸ್ಪಂದಿಸುವ ಮನಸ್ಸಿನವರು ಏನೇ ಹೇಳಿದರೂ ಅದು ವಿಮರ್ಶೆಯೇ. ಇದರಿಂದ ವ್ಯಕ್ತವಾದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಸಮಚಿತ್ತದಿಂದ ಲೇಖಕ ತನ್ನ ಬರವಣಿಗೆಯನ್ನು ಮುಂದುವರಿಸಬೇಕು. ಇಂತಹ ಗಟ್ಟಿತನ ಬೇಕಾಗಿದೆ ನಮ್ಮ ಲೇಖಕರಲ್ಲಿ.

6 ತುಂಬಾ ವಿಸ್ತಾರವಾಗಿ ತೆಗೆದುಕೊಂಡರೆ ಪ್ರಶಸ್ತಿಗಳು ಹಾಗೇ ಉಳಿಯುತ್ತವೆ. ಸಾಂಸ್ಕೃತಿಕ ರಾಜಕರಾಣದ ಗಾಳಿ ಸಾಹಿತ್ಯದಲ್ಲಿ ಬೀಸುವುದಿಲ್ಲ. ಬೇಕಾದವರನ್ನು ಮೇಲೇರಿಸುವ, ಬೇಡದವರನ್ನು ಪಾತಾಳಕ್ಕೆ ನೂಕುವ, ಜಾತಿ ರಾಜಕಾರಣ ಮಾಡುವ ವಿಮರ್ಶಕರಿಗೆ ಕೆಲಸವಿರುವುದಿಲ್ಲ. ಜನಪ್ರಿಯ ಸಾಹಿತ್ಯ ಎನ್ನುವುದು ಮುಗ್ಗರಿಸುತ್ತದೆ.

7 ನಾನು ವರ್ತಮಾನಕ್ಕೆ ಮುಖಾಮುಖಿಯಾಗಲು ಬರೆಯುತ್ತೇನೆ ಹೊರತು ಓದುಗನನ್ನು ವಿಮರ್ಶಕನನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆಯುವುದಿಲ್ಲ. ಹಾಗೇ ಬರೆದರೆ ಬರಹ ಸೃಜನಶೀಲ ಕ್ರಿಯೆ ಎಂದು ಅನ್ನಿಸಿಕೊಳ್ಳುವುದಿಲ್ಲ.

ಲೇಖಕಿ ಹಂಪಿ ಕನ್ನಡ ವಿಶ್ವವಿದ್ಯಾಲಯದ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ.